1) ಪ್ರಾವಿಡೆಂಟ್ ಫಂಡ್
2) ಉದ್ಯೋಗದಲ್ಲಿ ನಿರತವಾಗಿದ್ದಾಗ ಗಾಯಗೊಂಡಲ್ಲಿ ಸೌಲಭ್ಯ
3) ವಸತಿ
4) ಶಿಕ್ಷಣ
5) ಕಾರ್ಮಿಕ ಕುಶಲತೆಯ ಉನ್ನತೀಕರಣ
6) ಶವ ಸಂಸ್ಕಾರಕ್ಕೆ ಸಹಾಯ
7) ವೃದ್ಧಾಶ್ರಮಗಳು

ಇ) ಪ್ರಥಮ ಹಂತದಲ್ಲಿ 1) ದರ್ಜಿಗಳು, 2) ದೋಬಿಗಳು, 3) ಹಮಾಲರು, 4) ಆಟೋ ಮತ್ತು ಟ್ಯಾಕ್ಸಿ ಚಾಲಕರು ಹಾಗೂ 5) ಹೋಟೇಲ್ ಕಾರ್ಮಿಕರನ್ನು ಸಾಮಾಜಿಕ ಭದ್ರತಾ ಯೋಜನೆಯ ಅಡಿಯಲ್ಲಿ ತರಲು ಮಂಡಳಿಯಲ್ಲಿ ತೀರ್ಮಾನಿಸಲಾಗಿದೆ. ಯೋಜನೆಗಳನ್ನು ರೂಪಿಸಲು ವಿಶೇಷ ಸಮಿತಿಯನ್ನು ರೂಪಿಸಲಾಗಿದ್ದು, ಸಮಿತಿಯು ಈ ಐದು ಕ್ಷೇತ್ರದ ಕಾರ್ಮಿಕರ ಮತ್ತು ಮಾಲೀಕರ ಜೊತೆ ಚರ್ಚೆ ನಡೆಸಿದ್ದು,

1) ಅಂತಿಮ ಸಂಸ್ಕಾರದ ಧನಸಹಾಯ, 2) ಶೈಕ್ಷಣಿಕ ಧನ ಸಹಾಯ
2) (ನೊಂದಾಯಿತ ಕಾರ್ಮಿಕರ ಇಬ್ಬರು ಮಕ್ಕಳಿಗೆ),
3) ಅಪಘಾತದಿಂದ ಶಾಶ್ವತ ದುರ್ಬಲತೆ / ಮರಣಕ್ಕೀಡಾದ ನೋಂದಾಯಿತ ಕಾರ್ಮಿಕರಿಗೆ / ಅವರ ಅವಲಂಬಿತರಿಗೆ ಧನಸಹಾಯ,
4) ಭವಿಷ್ಯ ನಿಧಿ ಯೋಜನೆಗಳನ್ನು ಒಳಗೊಂಡ ಕರಡನ್ನು ಸಿದ್ಧಪಡಿಸಿರುತ್ತದೆ. ಅದನ್ನು ಮಂಡಳಿಯ ಅನುಮೋದನೆ ಪಡೆದ ನಂತರ ಅಧಿಸೂಚಿಸಲಾಗುವುದು.

ಸರ್ಕಾರಿ ಆಯುಷ್ ಆಸ್ಪತ್ರೆಗಳು ಚಿಕಿತ್ಸಾಲಯಗಳ ಸ್ಥಿತಿಗತಿ

864 (1482) ಶ್ರೀ ಹ್ಯಾರೀಸ್ ಎಸ್.ಎ. (ಶಾಂತಿನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಒಟ್ಟು ಆಯುಷ್ ಮತ್ತು ಚಿಕಿತ್ಸಾಲಯಗಳ ಸಂಖ್ಯೆ ಎಷ್ಟು;

ಆ) ಈ ಆಸ್ಪತ್ರೆ ಮತ್ತು ಚಿಕಿತ್ಸಾಲಯಗಳಿಗೆ ಮೂಲಭೂತ ಸೌಕರ್ಯಗಳು ಹಾಗೂ ಸಿಬ್ಬಂದಿಗಳನ್ನು ಒದಗಿಸಿಕೊಡಲಾಗಿದೆಯೇ; ಇಲ್ಲವಾದಲ್ಲಿ ಕೊರತೆ ಇರುವ ಸಿಬ್ಬಂದಿ ವರ್ಗವನ್ನು ತುಂಬಲು ಸರ್ಕಾರ ತ್ವರಿತ ಕ್ರಮ ಕೈಗೊಳ್ಳಲಾಗುವುದೇ;

ಇ) ಅಲೋಪತಿ ಮತ್ತು ಆಯುಷ್ ವೈದ್ಯರುಗಳ ಹುದ್ದೆಗಳಿಗೆ ಸಂಬಳ ಮತ್ತಿತರ ಸವಲತ್ತುಗಳನ್ನು ನೀಡುವಲ್ಲಿ ತಾರತಮ್ಯವಿರಲು ಕಾರಣಗಳೇನು; ಅವುಗಳನ್ನು ಸರಿಪಡಿಸಲು ಸರ್ಕಾರದ ಸಕಾಲಿಕ ಕ್ರಮಗಳೇನು?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 103 ಆಯುಷ್ ಆಸ್ಪತ್ರೆಗಳು ಮತ್ತು 659 ಆಯುಷ್ ಚಿಕಿತ್ಸಾಲಯಗಳಿವೆ.

1. ಸ್ವಂತ ಕಟ್ಟಡ ಹೊಂದಿದ ಆಸ್ಪತ್ರೆ / ಚಿಕಿತ್ಸಾಲಯ – 494
2. ಉಚಿತ ಕಟ್ಟಡ ಹೊಂದಿದ ಆಸ್ಪತ್ರೆ / ಚಿಕಿತ್ಸಾಲಯ – 249
3. ಬಾಡಿಗೆ ಕಟ್ಟಡ ಹೊಂದಿದ ಆಸ್ಪತ್ರೆ / ಚಿಕಿತ್ಸಾಲಯ – 19

ಆಯುಷ್ ಇಲಾಖೆಯಲ್ಲಿ ಕೆಳಕಂಡ ವಿವಿಧ ವೃಂದದ ಹುದ್ದೆಗಳು ಖಾಲಿಯಿದ್ದು, ಇವುಗಳನ್ನು ಆದ್ಯತೆಯ ಮೇರೆಗೆ ಹಂತ-ಹಂತವಾಗಿ ಭರ್ತಿ ಮಾಡಲಾಗುತ್ತಿದೆ.

ಕ್ರ ಸಂ.	ಪದನಾಮ	ಖಾಲಿ ಹುದ್ದೆ
1	ಆಯುಷ್ ವೈದ್ಯರು	93
2	ಶುಶ್ರೂಷಕಿಯರು	129
3	ಔಷಧಿ ವಿತರಕರು	30
4	ಕಿರಿಯ ಲ್ಯಾಬ್ ಟೆಕ್ನಿಷಿಯನ್	17
	ಒಟ್ಟು	**269**

O 31 E-60

ಇ) ಆಯುಷ್ ವೈದ್ಯರ ಸಂಬಳ ಮತ್ತಿತರ ಸವಲತ್ತುಗಳನ್ನು ನೀಡುವಲ್ಲಿ ಇರುವ ತಾರತಮ್ಯದ ಬಗ್ಗೆ 5ನೇ ವೇತನ ಆಯೋಗದ ಮುಂದೆ ಮಂಡಿಸಲಾಗಿತ್ತು. ಆದರೆ, ಆಯೋಗವು ವೈದ್ಯರು ದರ್ಜೆ–2 ಕ್ಕೆ ಸಂಬಂಧಿಸಿದಂತೆ ಮಾತ್ರ ವೇತನ ಶ್ರೇಣಿ ರೂ. 11400–21600 ರಿಂದ ರೂ. 13000–23850 ಕ್ಕೆ ಪರಿಷ್ಕರಿಸಲು ಶಿಫಾರಸ್ಸು ಮಾಡಿದ್ದು, ಆ ಪ್ರಕಾರ ಆದೇಶ ಹೊರಡಿಸಲಾಗಿದೆ. ಇತರೆ ಕೇಡರ್‌ಗಳ ವೇತನ ಪರಿಷ್ಕರಣೆಗೆ ವೇತನ ಆಯೋಗವು ಒಪ್ಪಿರುವುದಿಲ್ಲ.

ರಾಜ್ಯ ವಕ್ಫ್ ಮಂಡಳಿಯನ್ನು ಸೂಪರ್ ಸೀಡ್ ಮಾಡಿರುವುದು

866 (1484) ಶ್ರೀ ಹ್ಯಾರೀಸ್ ಎನ್.ಎ (ಶಾಂತಿನಗರ) : ಮಾನ್ಯ ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ವಕ್ಫ್ ಮಂಡಳಿಯನ್ನು ಸೂಪರ್ ಸೀಡ್ ಮಾಡಲು ಸರ್ಕಾರದ ಸಮರ್ಥನೆಗಳೇನು;

ಆ) ವಕ್ಫ್ ಮಂಡಳಿಯ ವಿರುದ್ಧ ಇರುವ ಆರೋಪಗಳು ಯಾವುವು; ಮೇಲ್ನೋಟಕೆ ಸಾಬೀತಾಗಿರುವ ಆರೋಪಗಳು ಎಷ್ಟು; ಅವುಗಳನ್ನು ಪುಷ್ಟೀಕರಿಸುವ ದಾಖಲೆಗಳನ್ನು ಸರ್ಕಾರ ಹೊಂದಿದೆಯೇ;

ಇ) ರಾಜ್ಯದಲ್ಲಿ ವಕ್ಫ್ ಮಂಡಳಿಯ ಜಮೀನು ಮಾರಾಟಗಳಲ್ಲಿ ಅವ್ಯವಹಾರ ನಡೆದಿರುವ ಖಚಿತ ಪ್ರಕರಣಗಳೆಷ್ಟು ವಕ್ಫ್ ಮಂಡಳಿಯನ್ನು ಸೂಪರ್ ಸೀಡ್ ಮಾಡುವುದರಿಂದ ಅಲ್ಪಸಂಖ್ಯಾತರಿಗಾಗಲಿ ಮತ್ತು ಸರ್ಕಾರಕ್ಕಾಗಲಿ ಆಗುವ ಪ್ರಯೋಜನಕಾರಿ ಅಂಶಗಳೇನು;

ಈ) ಇದ್ದಲ್ಲಿ, ಪ್ರಜಾಪ್ರಭುತ್ವದ ತತ್ವಗಳಡಿಯಲ್ಲಿ ವಕ್ಫ್ ಮಂಡಳಿಯ ಕಾರ್ಯನಿರ್ವಹಿಸಲು ಅನುಕೂಲ ಮಾಡಿಕೊಡುವ ಕುರಿತು ಸರ್ಕಾರದ ನಿಲುವುಗಳೇನು?

ಶ್ರೀ ಪ್ರೋ.ಡಾ: ಮುಮ್ತಾಜ್ ಅಲಿ ಖಾನ್ (ಹಜ್, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು) :

ಅ) ಕರ್ನಾಟಕ ವಕ್ಫ್ ರಕ್ಷಣಾ ಜಂಟಿ ಕ್ರಿಯಾ ಸಮಿತಿ (ರಿ) ಮತ್ತು ಕರ್ನಾಟಕ ಮುಸ್ಲಿಂ ಸಂಘರ್ಷ ಸಮಿತಿ ಇವೆರಡು ಸಂಸ್ಥೆಗಳಿಂದ ಕರ್ನಾಟಕ ರಾಜ್ಯ ವಕ್ಫ್ ಮಂಡಳಿ ವಿರುದ್ಧ ಹಲವಾರು ಆಪಾದನೆಗಳಿದ್ದು, ಸದರಿ ಆಪಾದನೆಗಳ ಪೈಕಿ ಪ್ರಮುಖ ಆರೋಪ: